ತನ್ನನ್ನು ಬಾಣಂತಿ ಕೋಣೆಯ ಮಸುಕುಗತ್ತಲಲ್ಲಿ ನಲವತ್ತು ದಿನ ರೋಗಿಯಂತೆ ಮಲಗಬೇಕಾದ ದುರವಸ್ಥೆಗೆ ಕಾರಣನಾದವನ ಮೇಲಿನ ಸಿಟ್ಟನ್ನು ಚಿಕ್ಕಮ್ಮ ಹೀಗೆ ತೀರಿಸಿಕೊಂಡಳು ಎಂದೇ ನನ್ನ ದೃಢವಾದ ನಂಬಿಕೆ.

ಸ್ತ್ರೀ ಪಾಲುದಾರಿಕೆ ಎಷ್ಟಿದ್ದರೂ ಪಾನಲೋಕವು ಪುರುಷಪ್ರಧಾನ ಚಟುವಟಿಕೆಯೇ. ಇದಕ್ಕೆ ವರ್ತಮಾನದ ಬಾರುಗಳೇ ಸಾಕ್ಷಿ. ಹೆಚ್ಚಿನ ಸ್ತ್ರೀಯರು ಪತಿಯು 'ಪರಮಾತ್ಮ' ಆಡಿಸಿದಂತೆ ಆಡುತ್ತ ಅಪರಾತ್ರಿಯಲ್ಲಿ ತೂರಾಡುತ್ತ ಬರುವುದನ್ನಾಗಲಿ, ಖಬರಿಲ್ಲದೆ ಬಿದ್ದುಕೊಳ್ಳುವುದನ್ನಾಗಲಿ ಇಚ್ಛಿಸುವುದಿಲ್ಲ. ಅವರಿಗೆ ಗಂಡನ ಆರೋಗ್ಯ–ಮರ್ಯಾದೆ ಮುಖ್ಯ. ಅದಕ್ಕಿಂತ ಮುಖ್ಯ ಆತ ಮಕ್ಕಳಿಗೆ ಅಪ್ಪನಾಗಿ ತನಗೆ ಗಂಡನಾಗಿ ಸಂಜೆ ಮನೆಯಲ್ಲಿರಬೇಕೆನ್ನುವುದು. ಆದರೆ ಬಹುತೇಕ ಪಾನಿಗಳು ಪ್ರಾಣಿಗಳು. ಕುಟುಂಬಗೇಡಿಗಳು. ಕೆಲವು ಸ್ತ್ರೀಯರು 'ಹೊರಗೆ ಏನಾರ ಮಾಡಿಕೊಂಡು ಹಾಳಾಗಿ. ಮಕ್ಕಳೆದುರು ಬೇಡ. ಮನೆಯನ್ನು ಬಾರು ಮಾಡಬೇಡಿ' ಎಂದು ಅರೆಸ್ವಾತಂತ್ರ್ಯ ನೀಡಿರುವರು; ಅಪರೂಪಕ್ಕೆ ಆಪ್ತ ಗೆಳೆಯರೊಟ್ಟಿಗೆ ಮನೆಪಾರ್ಟಿ ಮಾಡಿಕೊಂಡರೆ ಅಡ್ಡಿಪಡಿಸದೆ ಬೇಕಾದ್ದನ್ನು ಮಾಡಿ ಬಡಿಸುವರು. ಹೀಗಿದ್ದರೂ ಮನೆಪಾರ್ಟಿಗೆ ಆಹ್ವಾನಿತರಾದ ಯಾರೇ ಅತಿಥಿ, ಅತಿಥೇಯನು ಮನೆಯೊಡತಿಯ ನಿರಾಕ್ಷೇಪ ಪತ್ರ ಪಡೆದಿದ್ದಾನೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಒಳಿತು. ಹಾಗಲ್ಲದೆ ಹೋದಾಗ, ಒಡತಿಯ ಬಿಗಿಮುಖ, ಕಠೋರಮೌನ, ಕಿಚನಿನಲ್ಲಿ ಪಾತ್ರೆಗಳು ನಿಷ್ಕಾರಣ ಬೀಳುವುದು, ಮಕ್ಕಳು ತಪ್ಪಿಲ್ಲದೆ ಬಡಿಸಿಕೊಳ್ಳುವುದು, ಬಾಗಿಲು ಸಶಬ್ದವಾಗಿ ಮುಚ್ಚಿಕೊಳ್ಳುವುದು – ಇತ್ಯಾದಿ ಶಕುನ ಆಗುತ್ತಿದ್ದರೆ, ಕದನ ಘೋಷಣೆಯಾಗಿದೆ ಎಂದು ತಿಳಿಯುವುದು ಹಾಗೂ ಆತ್ಮರಕ್ಷಣೆಗೆ ಸೂಕ್ತವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

ನಾನೊಮ್ಮೆ ಪೂರ್ವಾಪರ ವಿಚಾರಿಸದೆ ಸಹೋದ್ಯೋಗಿಯ ಮನೆಗೆ ಹೋಗಿ ರುದ್ರನಾಟಕದ ದೃಶ್ಯಕ್ಕೆ ಪ್ರೇಕ್ಷಕನಾಗಬೇಕಾಯಿತು. ಆತ ವಿವಾಹ ಮಹೋತ್ಸವದ ದಶವಾರ್ಷಿಕ ದಿನದ ಪಾರ್ಟಿಯೆಂದು ಕರೆದೊಯ್ದಿದ್ದನು. ಗಂಡನೊಡನೆ ಊಟಕ್ಕೆ ಹೊರಗೆ ಹೋಗಬೇಕೆಂದು ಶಾನೇ ಸಿಂಗರಿಸಿಕೊಂಡು ಕಾದಿದ್ದ ಧರ್ಮಪತ್ನಿ, ನಮ್ಮನ್ನು ಕಂಡವರೇ ಸರಕ್ಕನೆ ತಿರುಗಿಹೋಗಿ ಕೋಣೆ ಸೇರಿಕೊಂಡರು. ಕೋಣೆಯ ಕದ ಪಟಾಕಿಯಂತೆ ಸಪ್ಪಳಗೈದಿತು. ಒಳಗಿಂದ ಉಚ್ಚದನಿಯಲ್ಲಿ ಟೇಪ್‌ರೆಕಾರ್ಡರು ಹಾಡನ್ನು ಬಿತ್ತರಿಸತೊಡಗಿತು. ಕ್ರಾಸ್‌ಫೈರಿಂಗಿನಲ್ಲಿ ಸಿಲುಕಿದೆನೆಂದು ಖಚಿತವಾಯಿತು. ಪಲಾಯನಕ್ಕೆ ಯತ್ನಿಸಿದೆ. ದೈನೇಸಿ ಮುಖಭಾವ ಹಾಕಿದ ಸಹೋದ್ಯೋಗಿ ಯುದ್ಧಭೂಮಿಯಲ್ಲಿ ಗುರಾಣಿ ಹಿಡಿವಂತೆ ಬಿಮ್ಮನೆ ನನ್ನ ಕೈಹಿಡಿದ. ಲೌಕಿಕ ತಾಪತ್ರಯಗಳಿಂದ ಮನಸ್ಸನ್ನು ಬಿಡುಗಡೆಗೊಳಿಸಿ ಉಪಾಧಿಗಳಿಲ್ಲದ ನಿರಾಳಾವಸ್ಥೆಗೆ ಒಯ್ಯಬಲ್ಲ ಪಾನವನ್ನು, ಸಿಡಿವ ಜ್ವಾಲಾಮುಖಿಯ ಮೇಲು ಕುಳಿತು ಮಾಡುವುದುಂಟೆ? ಆತ ಕೋಪಗೃಹದ ಬಳಿಸಾರಿ ಮೆಲ್ಲಗೆ ಕದತಟ್ಟಿದ. ಸೈನ್ಯವು ದಿಡ್ಡಿಬಾಗಿಲು ಒಡೆದು ನುಗ್ಗುವಂತೆ ಹೊರಬಂದ ಧರ್ಮಪತ್ನಿ, ದೇವರೆದುರು ಕಾಯಿ ಒಡೆವಂತೆ ಟೇಪ್‌ರೆಕಾರ್ಡರನ್ನು ಗಾರೆನೆಲಕ್ಕೆ ಅಪ್ಪಳಿಸಿದರು. ಬಡಪಾಯಿಯ ಅಂಗಾಂಗಳೆಲ್ಲ ಚೆಲ್ಲಿದರೋ ಮಲ್ಲಿಗೆಯಾ ಆದವು. ಮುಖೇಶನ 'ಜಬ್ ದಿಲ್ಹೀ ಟೂಟ್ ಗಯಾ' ಅರ್ಧಕ್ಕೇ ನಿಂತುಹೋಯಿತು. 'ನನ್ನ ಲೈಫೆಲ್ಲ ನಿನಗೆ ಮಾಡಿಡುವುದರಲ್ಲೇ ಮುಗದುಹೋತು. ಆಮ್ಲೆಟ್ ಬೇಕು ತಾನೇ? ಮಾಡಿ ತರ್ತೀನಿ. ತಿಂದು ಸಾಯಿರಿ' ಎಂದು, ನನ್ನತ್ತ ಹರಿತವಾದ ನೋಟವನ್ನೆಸೆದು ಒಳಹೋದರು. 'ಸಾಯಿರಿ' ಎಂಬ